(ಶ್ರೀ ಎಸ್. ಎಂ. ಕೃಷ್ಣ)

ಮಿಲ್ಲು, ಮಿನರ್ವಾ ಮಿಲ್ಲುಗಳಲ್ಲಿ ತಯಾರಾಗತಕ್ಕ ಬಟ್ಟೆಯನ್ನು ಉತ್ಪನ್ನಬೆಲೆಗೂ ಕಡಿಮೆ ದರದಲ್ಲಿ ಮಾರಾಟ ಮಾಡಿರುವುದರಿಂದ ಆ ಕಾರ್ಖಾನೆಗೆ ನಷ್ಟವಾಗಿದೆ ಎಂದು ಕೇಳಿದ್ದಾರೆ. ಅಲ್ಲಿ ಕಾಸ್ಟ್ ಆಫ್ ಪ್ರೊಡಕ್ಷನ್ನಿಗಿಂತ ಕಡಿಮೆ ದರದಲ್ಲಿ ಬಟ್ಟೆಯನ್ನು ವಿತರಣೆ ಮಾಡಿಲ್ಲ.

ಶ್ರೀ ಕೆ. ಶ್ರೀರಾಮುಲು.—ಈಗ ತಾವು ಮಾರಿಲ್ಲ ಎಂದು ಹೇಳಿದಿರಿ, ನಾನು ತಮಗೆ ಹೇಳುತ್ತೇನೆ, ಟರ್ಕಿ ಟವರ್ ನಂಬರ್, 3290 ಇದರ ಕಾಸ್ಟ್ ಆಫ್ ಪ್ರೊಡಕ್ಷನ್ 3 ರೂಪಾಯಿ 82 ಪೈಸಾ. ಆದರೆ ಇದನ್ನು ಮಾರಿರುವುದು ಒಂದು ರೂಪಾಯಿ 64 ಪೈಸಾ. ಇನ್ನೊಂದು ಟರ್ಕಿಟವರ್ ನಂಬರ್ 6268, ಇದರ ಕಾಸ್ಟ್ ಆಫ್ ಪ್ರೊಡಕ್ಷನ್ 2 ರೂಪಾಯಿ 20 ಪೈಸಾ ಅದನ್ನು ಮಾರಿರುವುದು 80 ಪೈಸಾ. ಈ ವಿಷಯವನ್ನು ತಿಳಿಸಿದಂತಹ ಕಮರ್ ಕುಮಾರ್ ಎನ್ನುವ ಅಧಿಕಾರಿಯನ್ನು ಗುಲ್ಬರ್ಗಾಕ್ಕೆ ವರ್ಗಮಾಡಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಈಗ ವಿಷಯವನ್ನು ಹೇಳುತ್ತಿದ್ದಾರೆ. ಅದನ್ನು ನಾನು ತನಿಖೆ ಮಾಡುತ್ತೇನೆ.

ಶ್ರೀ ಕೆ. ಶ್ರೀರಾಮುಲು.—ನಿಜಾಂಶವನ್ನು ಹೇಳತಕ್ಕಂಥಾ ಅಧಿಕಾರಿಯನ್ನು ಬೇರೆ ಕಡೆಗೆ ವರ್ಗಾ ಮಾಡುವುದರಿಂದ ಸರ್ಕಾರಕ್ಕೆ ಸಹಾಯವಾಗುತ್ತದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಯಾವ ಅಧಿಕಾರಿಯಿಂದ ಯಾವ ಫ್ಯಾಕ್ಟರಿಯಲ್ಲಿ ಹೆಚ್ಚು ಅನುಕೂಲವಾಗುತ್ತದೆ, ರಾಭದಾಯಕವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಂಥಾ ಅಧಿಕಾರಿಯನ್ನು ಇಟ್ಟುಕೊಳ್ಳಬೇಕಾಗಿರತಕ್ಕದ್ದು ಸರ್ಕಾರದ ಜವಾಬ್ದಾರಿ. ಈ ಕಾರ್ಖಾನೆಗಳು ಏನಿವೆ ಇವುಗಳೆಲ್ಲವೂ ಕೂಡ ನ್ಯಾಷನಲ್ ಜೆಕ್ಸ್‌ಟೈಲ್ಸ್ ಕಾರ್ಪೊರೇಷನ್ನಿನ ಅಧೀನದಲ್ಲಿ ನಡೆಯುತ್ತಿವೆ. ಈ ಕಾರ್ಖಾನೆಗಳು ಒಂದಲ್ಲಒಂದು ಕಾರಣಕ್ಕೋಸ್ಕರ ಬಹಳ ಕಾಲ ಮುಚ್ಚಿಹೋಗಿದ್ದುವು. ಈ ಸಿಕ್‌ಯೂನಿಟ್‌ಗಳನ್ನು ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೊರೇಷನ್ನಿನವರು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಸಿಕ್ ಮಿಲ್‌ಗಳನ್ನು ಮಹಾರಾಷ್ಟ್ರ, ಗುಜರಾತ್, ಮತ್ತು ಯು. ಪಿ. ಯಲ್ಲಿ ಮಾಡಿರುವಂತೆ ನಮ್ಮ ರಾಜ್ಯದಲ್ಲಿ ಸ್ಟೇಟ್ ಜೆಕ್ಸ್‌ಟೈಲ್ಸ್ ಕಾರ್ಪೊರೇಷನ್ ಮಾಡಿ ಆ ನಾಲ್ಕು ಸಿಕ್ ಯೂನಿಟ್‌ಗಳನ್ನೂ ಇದಕ್ಕೆ ವರ್ಗಾವಣೆ ಮಾಡಿಕೊಂಡು ಈ ಕಾರ್ಖಾನೆಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ ಎಂದು ಸರ್ಕಾರದವರು ಯೋಜನೆ ಮಾಡುತ್ತಿದ್ದಾರೆ.

ಶ್ರೀ ಕೆ. ಶ್ರೀರಾಮುಲು.—ಈ ಕಾರ್ಖಾನೆಗಳಲ್ಲಿ ಲುಕ್ಸಾನಾಗುವುದಕ್ಕೆ ಯಾವ ಯಾವ ಅಧಿಕಾರಿಗಳು ಕಾರಣರಾಗಿದ್ದಾರೆಯೋ ಅವರನ್ನು ಬೇರೆ ಕಡೆಗೆ ವರ್ಗ ಮಾಡಿ ಅಲ್ಲಿಗೆ ಹೊಸದಾಗಿ ಒಳ್ಳೆಯ ಅಧಿಕಾರಿಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಈಗ ಇರತಕ್ಕ ಅಧಿಕಾರಿಗಳನ್ನು ತೆಗೆದುಹಾಕುವುದಕ್ಕೆ ಅವರು ಮಿಸ್ ಬಿಹೇವ್ ಮಾಡಿದ್ದರೆ, ಇನ್‌ಎಫಿಷಿಯೆಂಟ್ ಆಗಿದ್ದರೆ, ಇನ್‌ಕಾಂಪಿಟೆಂಟ್ ಆಗಿದ್ದರೆ ಸರ್ವೀಸ್‌ನಿಂದ ತೆಗೆದುಹಾಕಬಹುದು. ಒಬ್ಬ ಕೆಟ್ಟ ಅಧಿಕಾರಿ, ಎಲ್ಲಿದ್ದರೇನು, ಗುಲ್ಬರ್ಗಾದಲ್ಲಿದ್ದರೇನು, ರಾಯಚೂರಿನಲ್ಲಿದ್ದರೇನು, ಅವನು ಎಲ್ಲಿದ್ದರೂ ಸಮಸ್ಯೆ ಪರಿಹಾರವಾಗುವುದಿಲ್ಲ. ಈಗ ನಮ್ಮ ರಾಜ್ಯದಲ್ಲಿ ಒಂದು ಸ್ಟೇಟ್ ಜೆಕ್ಸ್‌ಟೈಲ್ಸ್ ಕಾರ್ಪೊರೇಷನ್ ಮಾಡಿ ಆ ನಾಲ್ಕು ಕಾರ್ಖಾನೆಗಳನ್ನೂ ಇದಕ್ಕೆ ವರ್ಗಾವಣೆ ಮಾಡಿಕೊಂಡು ಈ ಕಾರ್ಖಾನೆಗಳನ್ನು ನಡೆಸಿಕೊಂಡು ಹೋಗಬೇಕೆಂದಿದ್ದೇವೆ.

## Construction of Samandur Village Tank

656. Sri M. B. RAMASWAMY (Anekal).—

Will the Minister for Public Works and Electricity be pleased to state :—

(*a*) whether it is fact that the plans and estimates have been prepared in respect of Samandur village tank, Anekal taluk ;

(*b*) if so, when the action taken to start the work of the tank ;

(*c*) if not, the reasons for not taking action to prepare plans and estimates and start the work of tank ?

Sri H. M. CHANNABASAPPA (Minister for Public Works and Electricity).—

(*a*) No.

(*b*) Does not arise in view of reply to clause (*a*).

(*c*) The proposal refers to the construction of a new tank near Samandur village which requires detailed investigations.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ ನನ್ನ (ಸಿ) ಪ್ರಶ್ನೆಗೆ ಉತ್ತರವಾಗಿ ಈ ಪ್ರಪೋಜಲ್ಸ್ ರೆಫರ್ ಮಾಡಿದ್ದೇವೆ ಎಂದು ಹೇಳಿದ್ದೀರಿ, ಏನು ಪ್ರಪೋಜರ್ಸ್ ರೆಫರ್ ಮಾಡಿದ್ದೀರಿ, ಯಾರಿಗೆ ರೆಫರ್ ಮಾಡಿದ್ದೀರಿ, ಎಷ್ಟು ದಿವಸಗಳಲ್ಲಿ ಆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ರೆಫರ್ ಮಾಡಿದ್ದೇವೆ ಎನ್ನುವುದು ಸ್ವಾಭಾವಿಕ. ಅದನ್ನು ನಮ್ಮ ಅಧಿಕಾರಿಗಳಿಗೆ ರೆಫರ್ ಮಾಡಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು ಪ್ರಮುಖವಾಗಿ ಹೇಳಬೇಕು, ಅದನ್ನು ಅಸಿಸ್ಟೆಂಟ್ ಇಂಜಿನಿಯರಿಗೆ ರೆಫರ್ ಮಾಡಿದ್ದೀರಾ, ಎಗ್ಸಿಕ್ಯುಟೀವ್ ಇಂಜಿನಿಯರಿಗೆ ರೆಫರ್ ಮಾಡಿದ್ದೀರಾ, ಅಥವಾ ಸೂಪರಿಂಟೆಂಡೆಂಟ್ ಇಂಜಿನಿಯರಿಗೆ ರೆಫರ್ ಮಾಡಿದ್ದೀರಾ ? ಮತ್ತು ಅದು ಎಷ್ಟು ದಿವಸಗಳಿಂದ ಪೆಂಡಿಂಗ್‌ನಲ್ಲಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಚೀಫ್ ಇಂಜಿನಿಯರಿಗೆ ರೆಫರ್ ಮಾಡಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ ಸಮಂದೂರು ಗ್ರಾಮದ ಕೆರೆಯ ಕೆಳಗಡೆ 200 ಎಕರೆ ನೀರಾವರಿಯಾಗುತ್ತದೆ. ಕಳೆದ 10 ವರ್ಷಗಳಿಂದ ಈ ಕೆರೆಯ ನಿರ್ಮಾಣಕ್ಕೆ ಪ್ರಪೋಜರ್ ಕಳುಹಿಸಲಾಗುತ್ತಿದೆ. ಆದರೆ ಆ ಕೆಲಸ ಇನ್ನೂ ಆಗಿಲ್ಲ, ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಿ ಆ ಫೈಲ್ ಎಲ್ಲಿದೆ ಎಂಬುದನ್ನು ತರಿಸಿ ಅದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಪರಿಶೀಲಿಸಬೇಕು ಎಂದು ಹೇಳಿದ್ದೇನೆ.

## Asphalting of Maddur-Basaral Road

721. Sri A. D. BILIGOWDA (Maddur).—

Will the Minister for Public Works and Electricity be pleased to state :—

(*a*) whether there is any proposal to asphalt the Maddur-Basaral Road *vi* Koppa :

(*b*) whether the new M. C. Road and the Shivapura Main Road in Maddur Town manitained by the P. W. D. is to be cement concreted ?

Sri H. M. CHANNABASAPPA (Minister for Public Works and Electricity).—

(*a*) No.